# ಮಿಂಚಿನ ಗೊಂಚಲು

ಓದುಗರ ಕೈಯಲ್ಲಿರುವ ಈ ಸಂಚಿಕೆ ಪ್ರಬಂಧಗಳ ವಿಶೇಷವಾಗಿದೆ. ಇಲ್ಲಿ ಕತೆಯಂತಹ ಪ್ರಬಂಧಗಳು, ಪ್ರಬಂಧದಂತಹ ಕತೆಗಳಿವೆ. ಇವು ಪ್ರಯೋಗನಿರತ, ಕಸುಬುದಾರ ಬರಹಗಾರರ ಪ್ರಬಂಧಗಳು. ಇದು ಕನ್ನಡದ ಪ್ರಬಂಧ ಪ್ರಕಾರಕ್ಕೆ 'ಮಯೂರ'ದ ಕಿರು ಕಾಣಿಕೆ.

ಕನ್ನಡದಲ್ಲಿ ಲಲಿತ ಪ್ರಬಂಧ, ಪ್ರಬಂಧಗಳಿಗೆ ಅನಾದಿಯಿಂದಲೂ ಓದುಗರಿದ್ದಾರೆ. ಅದು ಅನೇಕ ಓದುಗರ, ಲೇಖಕರ ಬಹಳ ಪ್ರೀತಿಯ ಪ್ರಕಾರ. ಗೊರೂರು, ಎ.ಎನ್. ಮೂರ್ತಿರಾವ್, ಪುತಿನ, ಪಿ. ಲಂಕೇಶ್, ಅನಂತಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಚಂಪಾ, ಎಸ್. ದಿವಾಕರ್, ಕೇಶವರೆಡ್ಡಿ ಹಂದ್ರಾಳ, ಜಯಂತ ಕಾಯ್ಕಿಣಿ, ಚಂದ್ರಶೇಖರ ಆಲೂರು ಮತ್ತಿತರರು ಈ ಪ್ರಕಾರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ; ಅದನ್ನು ವಿಸ್ತರಿಸಿದ್ದಾರೆ. ಕತೆಗಾರರಾದ ಯಶವಂತ ಚಿತ್ತಾಲ, ತೇಜಸ್ವಿ ಕತೆಯ ಸ್ಪರ್ಶ, ನಿರೂಪಣೆ, ಧಾಟಿ ಇರುವಂತಹ ಪ್ರಬಂಧಗಳನ್ನು ಬರೆದಿದ್ದಾರೆ.

ಪ್ರಬಂಧ ಕತೆಯಂತಲ್ಲ; ಆದರೆ ಅದು ಕತೆಯೂ ಹೌದು. ತನ್ನ ಸಡಿಲ, ಲವಲವಿಕೆಯ, ಮುಕ್ತ ನಿರೂಪಣೆಯಲ್ಲಿ ಅದು ಕತೆಯೂ ಆಗುತ್ತದೆ. ಆದರೆ ಕತೆಯಾಗಿಯೇ ಗುರುತಿಸಿಕೊಳ್ಳಲು ಹಿಂಜರಿಯುತ್ತದೆ. ಸಣ್ಣಕತೆಗೆ ಕತೆಯೇ ಆಗಬೇಕಾದ ಜಿಗುಟುತನ, ಅನಿವಾರ್ಯತೆ, ಬದ್ಧತೆ ಇರುತ್ತದೆ. ಪ್ರಬಂಧ ಹಾಗಲ್ಲ, ಅದು ಎಲ್ಲವನ್ನೂ ಒಳಗೊಂಡೂ ತನ್ನತನವನ್ನು ಉಳಿಸಿಕೊಳ್ಳಬಹುದು. ಹಾಗಿದ್ದರೆ ಮಾತ್ರ ಅದು ಪ್ರಬಂಧವಾಗುವುದು ಸಾಧ್ಯ. ಅದೊಂದು ರೀತಿಯಲ್ಲಿ ಊರಮೇಲೆ ಬಿಟ್ಟ ತುಡುಗು ದನದ ತರಹ. ಎಲ್ಲಿ ಬೇಕಾದರೂ, ಯಾರ ಹಿತ್ತಲಿನಲ್ಲಾದರೂ ಮೇಯಬಹುದು, ಅಲೆಯಬಹುದು. ಕತೆ ಒಂದು ಬಗೆಯಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿ ಸಾಕಿದ ಆಕಳು. ಅದಕ್ಕೆ ಕೆಲವು ಕಟ್ಟುಪಾಡು, ಎಲ್ಲೆಗಳಿವೆ. ಅದು ಬೇಕಾದಲ್ಲಿ ನುಗ್ಗಿ ಮೇಯುವವಂತಿಲ್ಲ.

ಪ್ರಬಂಧಕಾರರಿಗೆ ಅಪಾರ ಜೀವನಮೋಹ, ಆಸಕ್ತಿಗಳು ಬೇಕಾಗುತ್ತವೆ. ಅಂತಹ ಮೋಹಿಗಳು ಬರೆದ ಪ್ರಬಂಧಗಳು ಇಲ್ಲಿವೆ. ಬದುಕಿನ, ಸತ್ಯದ ಸಮೀಪ ಹೋಗುತ್ತಿರುವಂತೆ ಬರವಣಿಗೆ ವಿಶಿಷ್ಟ ಕಾಂತಿಯಿಂದ ಹೊಳೆಯತೊಡಗುತ್ತದೆ. ಅಂತಹ ಕಾಂತಿಯನ್ನು ಹೊಮ್ಮಿಸುವ ಈ ಪ್ರಬಂಧಗಳು ಹಲ ಬಗೆಯ ಲೋಕಗಳ ದರ್ಶನ ಮಾಡಿಸುತ್ತವೆ. ಇಲ್ಲಿನ ಪ್ರಬಂಧಗಳಲ್ಲಿ ಹೊಸ ಮಿಂಚಿನ ಗೊಂಚಲು ಓದುಗರಿಗೆ ಹೊಳೆದರೆ ನಮ್ಮ ಈ ಪ್ರಯತ್ನ ಸಾರ್ಥಕ.

**ಸಂದೀಪ ನಾಯಕ**

